### ಇಲ್ಲಿ ಎಲ್ಲವೂ ಅತಿರೇಕ, ಅತಿಶಯ!

★ ವಿಶ್ವದಲ್ಲೇ ಅತ್ಯಂತ ಹೆಚ್ಚಿನ ಸಾಕ್ಷರತೆ (99.9%)
★ ವಿಶ್ವದಲ್ಲೇವಿರಳ ಜನಸಾಂದ್ರತೆ– ಒಂದು ಚದರ ಕಿ.ಮೀ. ಜಾಗದಲ್ಲಿ ಸರಾಸರಿ ಕೇವಲ ಮೂರು ಜನ!
★ ಐಸ್‌ಲ್ಯಾಂಡ್ ಹೆಂಗಸರ ಸರಾಸರಿ ಆಯಸ್ಸು 84 ವರ್ಷವಾದರೆ, ಗಂಡಸರ ಸರಾಸರಿ ಆಯಸ್ಸು 81 ವರ್ಷ.
★ ಅತ್ಯಂತ ಹೆಚ್ಚಿನ ಮನೆಗಳಲ್ಲಿ ಇಂಟರ್‌ನೆಟ್ ಬಳಕೆ (84%)
★ ಪ್ರತಿ ವ್ಯಕ್ತಿಯಿಂದ ಹೆಚ್ಚಿನ ವಾರ್ಷಿಕ ಮೀನಿನ ಬಳಕೆ (91 ಕೆ.ಜಿ.) ಕೋಕಾಕೋಲಾ ಸೇವನೆ (115 ಲೀಟರ್).

ಈ ದೇಶದ ಪ್ರತಿದಿನದ ಹವಾಮಾನವೂ ಚಂಚಲ. ಬಿಸಿಲು, ಮೋಡ, ಮಳೆ, ಚಳಿ, ಬಿರುಗಾಳಿ. ಮಂಜು, ತೂಫಾನು– ಒಂದೇ ಘಂಟೆಯೊಳಗೆ ಒಂದರ ಹಿಂದೆ ಒಂದಾಗಿ ಮರುಕಳಿಸುತ್ತವೆ.
ಇಲ್ಲಿನ ಚಳಿಗಾಲದ ಜನವರಿ ತಿಂಗಳ ತಾಪಮಾನ –1 ಡಿಗ್ರಿ ಸಿ.; ಬೇಸಿಗೆಯ ಜುಲೈನ ತಾಪಮಾನ –15 ಡಿಗ್ರಿ ಸಿ!
ವರ್ಷವಿಡೀ ಮಳೆ. ಬೇಸಿಗೆಯ ದಿನದಲ್ಲಿ 22 ಘಂಟೆಗಳ ಬಿಸಿಲಿದ್ದರೆ, ಚಳಿಗಾಲದಲ್ಲಿ ಕೇವಲ 4 ಘಂಟೆ ಬಿಸಿಲು!
ಐಸ್‌ಲ್ಯಾಂಡ್‌ನ ಉತ್ತರಕ್ಕೆ ಹೋದರೆ ಎಂದೂ ಮುಳುಗದ 'ನಡುರಾತ್ರಿಯ ಸೂರ್ಯ'ನನ್ನು ನೋಡಬಹುದು.



ಜೋಕಿಮ್‌ನ ಊರು ಲೋಜೌನಿನಲ್ಲಿ ಲೇಕ್‌ಜಿನೀವಾ ಪಕ್ಕ ಒಂದು ಶುಭ್ರ, ಸುಂದರ ಬೆಳಗು

ಪಕ್ಕದಲ್ಲೇ ಗುಡಾರ ಹೂಡಲು ಪ್ರಶಸ್ತ ಜಾಗ ಸಿಕ್ಕಿತು. ನಮ್ಮ ಗೆಳೆಯ ಯಾನಿಕ್‌ಗೆ ಬಲ ಮೊಣಕಾಲ ಗಂಟು ನೋವು ಶುರುವಾದ್ದರಿಂದ, ವಿಶ್ರಾಂತಿಗೆ ಡೇರೆಯಲ್ಲೇ ಬಿಟ್ಟು, ನಾನು ಮತ್ತು ಜೋಕಿಮ್ ಸೆಲ್‌ಫೋಸ್ ಊರು ತಿರುಗಾಡಿದೆವು. 19ನೇ ಶತಮಾನದ ವಾಸ್ತು ಮನೆಗಳಿರುವ ಐಜಾರ್‌ಬಾಕಿ (Eyjarbakki) ಎಂಬ ಹಳ್ಳಿ, 1765ರಲ್ಲಿ ಕಟ್ಟಿದ ಹಳೆಯ ಜಾನಪದ ಸಂಗ್ರಹಾಲಯ, ಮಕ್ಕಳಿಗೆ ಮುದ ಕೊಡುವ ಭೂತದ ಅರಮನೆಗಳನ್ನು ನೋಡಿದೆವು. ಈ ಎರಡು ದಿನಗಳಲ್ಲಿ, ಯಾನಿಕ್‌ನ ಗಂಟು ನೋವು ಕಮ್ಮಿಯಾಗದೆ, ಜಾಸ್ತಿಯಾದುದರಿಂದ ಸಮಾಧಾನ ಮಾಡಿ, ಅವನನ್ನು ಹಿಂದಕ್ಕೆ ಕಳುಹಿಸಿದೆವು.

## ದುರ್ಗಮ ಹೆದ್ದಾರಿಯಲ್ಲಿ..

ಎರಡು ದಿನಗಳ ವಿಶ್ರಾಂತಿ, ಉತ್ತಮ ಹವಾಮಾನ ಕೊಟ್ಟ ಹುರುಪಿನಿಂದ ಎಫ್ 35 ಮೂಲಕ ನಾವಿಬ್ಬರು ಸೈಕಲ್ ಸಾಹಸ ಮುಂದುವರಿಸಿದೆವು. ಸೆಲ್‌ಫೋಸ್‌ನಿಂದ ಪ್ರಾರಂಭವಾಗುವ ಎಫ್ 35, ದಕ್ಷಿಣ ಐಸ್‌ಲ್ಯಾಂಡನ್ನು ಉತ್ತರ ಐಸ್‌ಲ್ಯಾಂಡಿಗೆ ಜೋಡಿಸುವ ಹೆದ್ದಾರಿ. ಮರುಭೂಮಿ, ಹೆಪ್ಪುಗಟ್ಟಿದ ಹಿಮಪರ್ವತಗಳ ಮೂಲಕ ಹಾದು ಹೋಗುವ ಈ ದಾರಿ ನಿಜಕ್ಕೂ ದುರ್ಗಮ, ನಿಜಕ್ಕೂ ನಿರ್ಜಲ ಹಾಗೂ ನಮ್ಮೊಳಗಿನ ಸಾಹಸಕ್ಕೊಂದು ಆಹ್ವಾನ.

ಎಫ್ 35 ದಾರಿಯಲ್ಲಿನ ಮೊದಲ ಆಕರ್ಷಣೆ ಗೆಸಿರ್ (Geysir). ಪ್ರತಿ ಏಳರಿಂದ ಎಂಟು ನಿಮಿಷಕ್ಕೊಮ್ಮೆ ತನ್ನಿಂದ ತಾನೇ ಭೂಮಿ ಬಿರಿದು ಇಪ್ಪತ್ತು ಮೀಟರ್‌ನಷ್ಟು ಮೇಲಕ್ಕೆ ಶಬ್ದ ಮಾಡುತ್ತ ರಭಸದಿಂದ ಚಿಮ್ಮುವ ಬಿಸಿ ನೀರಿನ ಬುಗ್ಗೆಯ ಆಶ್ಚರ್ಯಕರ ದೃಶ್ಯ ನೋಡಲು ಜಗತ್ತಿನ ಎಲ್ಲಾ ಪ್ರವಾಸಿಗಳೂ ಇಲ್ಲಿ ನೆರೆಯುತ್ತಾರೆ. ರೈಯೊಲೈಟ್ ಎಂಬ ಮೃದು ಕಲ್ಲಿನಿಂದ ಕೂಡಿದ ಇಲ್ಲಿನ ನೆಲದ ಪದರಿನ ಕೆಳಗೆ ಸಂಗ್ರಹಗೊಳ್ಳುವ ಕಾರ್ಬನ್ ಡೈ ಆಕ್ಸೈಡ್ ಅನಿಲದ ಒತ್ತಡ ಹೆಚ್ಚಾದಂತೆ, ನೆಲ ಬಡಿದು ಅದು ಹೊರ ಬರುವಾಗ, ಅದರ ಒಟ್ಟಿಗೆ ಸಾಕಷ್ಟು ನೀರನ್ನೂ ಬುಗ್ಗೆಯ ರೂಪದಲ್ಲಿ ಚಿಮ್ಮಿಸುತ್ತದೆ. ಅಲ್ಲಿಂದ ಮುಂದೆ ಹತ್ತಿರದಲ್ಲೇ ಇರುವುದು ಗಲ್‌ಫೋಸ್‌ನ (Gullfoss) ಅದ್ಭುತ ಜಲಪಾತ. ಹವಿಟಾ ಎಂಬ 'ಬಿಳಿನದಿ'ಯಿಂದ ಹುಟ್ಟುವ ಈ ಜಲಪಾತದ ಶಕ್ತಿ ಅಗಾಧ. ಅದರ ಒಟ್ಟು ಆಕಾರ ಮತ್ತು ಸ್ವರೂಪವೂ ಅದ್ವಿತೀಯ. ಒಟ್ಟಾರೆ ಮೂರು ಹಂತದಲ್ಲಿ ಬೀಳುವ ಬಿಳಿ ಜಲಧಾರೆಯ ಬೆಡಗು ಮತ್ತು ಬೆರಗು ಬಲು ಅಪರೂಪ. ಗಲ್‌ಫೋಸ್‌ನಿಂದ ದೂರದಲ್ಲಿ ಕಾಣುವ ತಿಳಿ ನೀಲಿ ಬಣ್ಣದ ಹಿಮಚ್ಛಾದಿತ ಬ್ಲಾಫೆಲ್ ಪರ್ವತದ ನೋಟ ಅತೀ ಮನಮೋಹಕ.

ಜಲಪಾತದಿಂದ ಉತ್ತರಕ್ಕೆ ಹೊರಟಂತೆ, ಮನುಷ್ಯ ನಿರ್ಮಿತ ಮಾರ್ಗಗಳು ಕೊನೆಗೊಂಡು, ದುರ್ಗಮ, ಶ್ರಮದಾಯಕ ದಾರಿ ಶುರುವಾಗುತ್ತವೆ. ಜೊತೆಗೆ ಥಟ್ಟನೆ ಮಳೆ ಸುರಿಯಲು ಪ್ರಾರಂಭವಾಗುತ್ತದೆ. ಆ ರಾತ್ರಿ, ಅಲ್ಲೇ ಕ್ಯಾಂಪ್ ಹೂಡಿ, ಮರುದಿನ ಬೆಳಿಗ್ಗೆ ಎತ್ತರದ ಹಿಮ ಪ್ರಸ್ಥಭೂಮಿಗೆ ಪ್ರವೇಶಿಸಿದೆವು. ಎತ್ತರದ ಗುಡ್ಡದ ಕಠಿಣ ದಾರಿಯನ್ನು ಏರಿ ಹಿಮ ಪರ್ವತಗಳ ಸಮೂಹವನ್ನು ತಲುಪಿದೆವು. ಎತ್ತೆತ್ತಲೂ, ಸುತ್ತಲೂ ತಲೆ ಎತ್ತಿ ನಿಂತ ಈ ಹಿಮಪರ್ವತಗಳ, ಅದರಲ್ಲೂ ಐಸ್‌ಲ್ಯಾಂಡ್‌ನಲ್ಲೇ ದೊಡ್ಡದಾದ ಲಾಂಗ್‌ಜೋಕುಲ್ (Longjokull) ಮತ್ತು ಹೋಪ್ಸ್‌ಜಾಕುಲ್(Hofsjokull) ಹಿಮಪರ್ವತಗಳ ನಡುವಿನ ತಣ್ಣಗಿನ ವಿಶಾಲ ಹಿಮ ಮರು ಭೂಮಿಯಲ್ಲಿ ಎಲ್ಲವೂ ತಣ್ಣಗೆ, ಊಹಿಸಲಾಗದ ತಣ್ಣಗಿನ ನಿರ್ಜನತೆ. ಜನರು ಬಿಡಿ, ಗಿಡ, ಮರ, ಪಶು ಪಕ್ಷಿ ಯಾವುದೇ ರೀತಿಯ ಜೀವ ಸಂಕುಲವೇ ಇಲ್ಲದ ನೀರವ, ನಿರ್ಜೀವ, ನಿರ್ಜನತೆ.

ಮುಂದಿನ ಎರಡು ದಿನ ಏನೂ ಇಲ್ಲ, ಯಾರೂ ಇಲ್ಲ, ಬರಿಯ ನಾವಿಬ್ಬರೇ. ಸೈಕಲ್ ಮಾಡುತ್ತಿದ್ದ ಶಬ್ದ ಬಿಟ್ಟರೆ, ನಮ್ಮ ಹೃದಯ ಮಿಡಿವ ಶಬ್ದ, ಬಿಡುವ ಉಸಿರಿನ ಶಬ್ದ, ಜೊತೆಗೆ ಬೀಸುವ ಗಾಳಿಯ ಶಬ್ದ. ನಿಜವಾದ ಅರ್ಥದಲ್ಲಿ ಒಂಟಿತನ ಅರ್ಥವಾಗಬೇಕಾದರೆ, ಅನುಭವಿಸಬೇಕಾದರೆ ನಿಜವಾಗಲೂ ಇಲ್ಲಿಗೇ ಬರಬೇಕು. ಈ ಶೂನ್ಯತೆಯೊಟ್ಟಿಗೆ ಕಿತ್ತು ತಿನ್ನುವ ಚಳಿ. ಸೈಕಲ್ ಬಿಡುವುದನ್ನು ಕೆಲ ನಿಮಿಷ ನಿಲ್ಲಿಸಿದರೆ ಸಾಕು, ದೇಹದ ಬಿಸಿ ಆರಿ, ಚಳಿ ಏರಿ, ಜೀವ ನಡುಗಲು ಶುರುವಾಗುತ್ತದೆ. ಯಾವುದೇ ಆಸರೆಯಿಲ್ಲದೆ, ಧಾರಾಕಾರವಾಗಿ ಸುರಿಯಲು ಶುರುವಾದ ಮಳೆಯಿಂದ ತಪ್ಪಿಸಿಕೊಳ್ಳಲು ಯಾವುದೇ ರಕ್ಷಣೆಯಿಲ್ಲದೆ, ಕೊನೆಗೆ ಅಲ್ಲಿದ್ದ ದೊಡ್ಡ ದೊಡ್ಡ ಬಂಡೆಕಲ್ಲುಗಳ ಹಿಂದೆ ಸಾಧ್ಯವಾದಷ್ಟು ಬಾಗಿ, ಜತನದಿಂದ ಕಾಪಾಡಿ ತಂದಿದ್ದ ನಮ್ಮ ಬ್ರೆಡ್